सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

2ನೇ ಮತ್ತು 3ನೇ ಮಹಡಿ, ನಂ.16, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080,
ಇಮೇಲ್: karsec@gmail.com: ದೂರವಾಣಿ ಸಂಖ್ಯೆ: 080-22205189/93

## ರಾಜ್ಯ ಚುನಾವಣಾ ಆಯೋಗದ ನಡವಳಿಗಳು

**ವಿಷಯ:** ಗ್ರಾಮ ಪಂಚಾಯಿತಿ ಉಪ ಚುನಾವಣೆ ಮೇ-2025, ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, 33-ಕಂದಗಲ್ಲು ಗ್ರಾಮ ಪಂಚಾಯಿತಿಯ 3-ಕಂದಗಲ್ಲು-3 ಕ್ಷೇತ್ರದ ಉಪ ಚುನಾವಣೆ ಕುರಿತು.

**ಓದಲಾಗಿದೆ:** 1 . ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: SEC/RLB/ BELN/GP/1/2025 ದಿನಾಂಕ: 04.04.2025.

2. ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ ರವರ ಪತ್ರ ಸಂಖ್ಯೆ: ರಾಚುಆ. ಸಿಆರ್.59/2024-25 ದಿನಾಂಕ:27.03.2025.

3. ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ ರವರ ಪತ್ರ ಸಂಖ್ಯೆ: ರಾಚುಆ. ಸಿಆರ್.59/2024-25 ದಿನಾಂಕ:15.04.2025

*****

**ಪ್ರಸ್ತಾವನೆ:-**

ರಾಜ್ಯ ಚುನಾವಣಾ ಆಯೋಗವು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಎ ಮತ್ತು 308ಎಬಿ ರನ್ವಯ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು, 1993ರ ನಿಯಮ 12 ರನ್ವಯ ವಿವಿಧ ಕಾರಣಗಳಿಂದ ತೆರವಾಗಿರುವ ಗ್ರಾಮ ಪಂಚಾಯಿತಿ ಖಾಲಿ ಸ್ಥಾನಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಘೋಷಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಂತೆ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ರವರು ದಾವಣಗೆರೆ ತಾಲ್ಲೂಕು, 33-ಕಂದಗಲ್ಲು ಗ್ರಾಮ ಪಂಚಾಯಿತಿಯ 3-ಕಂದಗಲ್ಲು-3 ಕ್ಷೇತ್ರದ ಸದಸ್ಯರಾದ ಶ್ರೀ ಹಾಲೇಶ್ ಎಂ.ಬಿ ಬಿನ್ ಬಸವರಾಜಪ್ಪ ರವರ ರಾಜಿನಾಮೆಯಿಂದ ತೆರವಾಗಿರುವುದಾಗಿ ವರದಿ ನೀಡಿದ್ದ ಹಿನ್ನೆಲೆಯಲ್ಲಿ ಸದರಿ ತೆರವಾಗಿರುವ ಸ್ಥಾನಕ್ಕೆ ಉಪ ಚುನಾವಣೆಯನ್ನು ಘೋಷಿಸಲಾಗಿರುತ್ತದೆ

ಮುಂದುವರೆದು, ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ರವರು ದಾವಣಗೆರೆ ತಾಲ್ಲೂಕು, 33-ಕಂದಗಲ್ಲು ಗ್ರಾಮ ಪಂಚಾಯಿತಿಯ 3-ಕಂದಗಲ್ಲು-3 ಕ್ಷೇತ್ರದ ಸದಸ್ಯರಾದ ಶ್ರೀ ಹಾಲೇಶ್ ಎಂ.ಬಿ ಬಿನ್ ಬಸವರಾಜಪ್ಪ ರವರು ದಿನಾಂಕ:25.02.2025 ರಂದು ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ತದನಂತರ ದಿನಾಂಕ:03.03.2025 ರಂದು ಸದರಿ ರಾಜಿನಾಮೆಯನ್ನು ವಾಪಸ್ಸು ಪಡೆದಿರುವ ಪ್ರಯುಕ್ತ ಸದರಿ ಸದಸ್ಯ ಸ್ಥಾನವು ಖಾಲಿ ಇರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, 33-ಕಂದಗಲ್ಲು ಗ್ರಾಮ ಪಂಚಾಯಿತಿಯ 3-ಕಂದಗಲ್ಲು-3 ಕ್ಷೇತ್ರದ ಸ್ಥಾನವು ಸದಸ್ಯರ ರಾಜೀನಾಮೆಯಿಂದ ತೆರವಾಗದೆ ಇರುವುದು

ಕಂಡುಬಂದಿರುವುದರಿಂದ, ಆಯೋಗವು ಈಗಾಗಲೇ ಘೋಷಿಸಿರುವ ಉಪಚುನಾವಣೆಯ ವೇಳಾಪಟ್ಟಿಯಿಂದ ಸದರಿ ಸ್ಥಾನವನ್ನು ಕೈಬಿಡುವುದು ಸೂಕ್ತವೆಂದು ಅಭಿಪ್ರಾಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: SEC/RLB/BELN/1/2025, ಬೆಂಗಳೂರು ದಿನಾಂಕ:17-04-2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಂತೆ ಭಾರತ ಸಂವಿಧಾನದ ಅನುಚ್ಛೇದ 243K ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ರಲ್ಲಿ ಪ್ರದತ್ತವಾಗಿರುವ ಅಧಿಕಾರದ ಮೇರೆಗೆ, ರಾಜ್ಯ ಚುನಾವಣಾ ಆಯೋಗವು ದಿನಾಂಕ: 04.04.2025ರ ಆದೇಶದಲ್ಲಿ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, 33-ಕಂದಗಲ್ಲು ಗ್ರಾಮ ಪಂಚಾಯಿತಿಯ 3-ಕಂದಗಲ್ಲು-3ರ ಕ್ಷೇತ್ರದ ಸ್ಥಾನಕ್ಕೆ ಘೋಷಿಸಿರುವ ಉಪ ಚುನಾವಣೆಯನ್ನು ಕೈಬಿಡಲಾಗಿದೆ ಎಂದು ಈ ಮೂಲಕ ಆದೇಶಿಸಿದೆ.

ಆದೇಶಾನುಸಾರ

17/04/2025.

(ಪ್ರಕಾಶ್ ಎಸ್. ಮರಬಳ್ಳಿ)
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

ಇವರಿಗೆ,
ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ.